ಈ ಯೋಜನೆಯ ಒಟ್ಟು ಅನುದಾನ ರೂ. 1454.00 ಕೋಟಿಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 16 ಐಎಸ್‌ಟಿ 09, ದಿನಾಂಕ 24-6-2009ರನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಈ ಯೋಜನೆಯು ನಗರ ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಕಲಂ-349 ರಂತೆ ಯಾವುದೇ ಒಂದು ಪ್ರದೇಶವು ನಗರ ಸ್ಥಳೀಯ ಸಂಸ್ಥೆಯೆಂದು ಪರಿಗಣಿಸಲು/ಘೋಷಿಸಲ್ಪಡಲು ಕೆಲವು ನಿಬಂಧನೆ/ಮಾನದಂಡಗಳನ್ನು ಪೂರೈಸಬೇಕಾಗಿರುತ್ತದೆ.

ಆದರಂತೆ, ಕನಿಷ್ಟ ನಗರ ಪ್ರದೇಶವಾದ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಜನಸಂಖ್ಯೆಯ 10,000ಕ್ಕೆ ಮೇಲ್ಪಟ್ಟು ಮತ್ತು 20,000 ಒಳಗೆ ಇರತಕ್ಕದ್ದು.

ಅದರಂತೆ ಪುರಸಭೆ ವ್ಯಾಪ್ತಿಯಲ್ಲಿ ಜನಸಂಖ್ಯೆಯು 20,000ಕ್ಕೆ ಮೇಲ್ಪಟ್ಟು 50,000 ಒಳಗೆ ಇರತಕ್ಕದ್ದು.

ಈ ಪ್ರದೇಶದ ಜನ ಸಾಂದ್ರತೆ 1 ಕಿ.ಮೀ. ವಿಸ್ತೀರ್ಣಕ್ಕೆ 400 ನಿವಾಸಿಗಳಷ್ಟು ಇರಬೇಕಾಗಿರುತ್ತದೆ ಹಾಗೂ ಒಟ್ಟು ಉದ್ಯೋಗಿಗಳ ಪೈಕಿ ಶೇ. 50.00ರಷ್ಟು ಕೃಷಿಯೇತರ ಚಟುವಟಿಕೆಯ ಉದ್ಯೋಗಿಗಳು ಇರಬೇಕಾಗಿರುತ್ತದೆ.

ಇ) ಸರ್ಕಾರದ ಆದೇಶ ಸಂಖ್ಯೆ: ನಅಇ 16 ಐಎಸ್‌ಟಿ 2009, ದಿನಾಂಕ 24-6-2009ರಂತೆ ಯೋಜನೆಯ ಕರಡು ಕ್ರಿಯಾ ಯೋಜನೆಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅನುಮೋದಿಸುವ ಸಂದರ್ಭದಲ್ಲಿ ಸಂಬಂಧಿಸಿದ ವಿಧಾನ ಸಭಾ / ವಿಧಾನ ಪರಿಷತ್ ಸದಸ್ಯರ ಸಲಹೆ / ಅಭಿಪ್ರಾಯವನ್ನು ಪರಿಗಣಿಸಲು ಸೂಚಿಸಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಮೂಲಭೂತ ಸೆಸ್ ಹಣ ಕುರಿತು

388 (739) ಶ್ರೀ ಕೆ.ಜೆ. ಜಾರ್ಜ್ (ಸರ್ವಜ್ಞನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮೂಲಭೂತ ಸೌಕರ್ಯ ಸೆಸ್ ಯಾವ ವರ್ಷದಿಂದ ಯಾವ ವರ್ಷದವರೆಗೆ ಸಂಗ್ರಹಿಸಲಾಗಿದೆ;

ಆ) ಈ ಸೆಸ್‌ನಿಂದ ಸಂಗ್ರಹವಾದ ಒಟ್ಟು ಹಣವೆಷ್ಟು;

ಇ) ಈ ಮೂಲಭೂತ ಸೆಸ್ ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ವಿನಿಯೋಜಿಸಲಾಗಿದೆ?

ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಯಾವುದೇ ಮೂಲಭೂತ ಸೌಕರ್ಯ ಸೆಸ್‌ನ್ನು ವಿಧಿಸುವ ಬಗ್ಗೆ ಪಾಲಿಕೆಯು ತೀರ್ಮಾನ ಕೈಗೊಂಡಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡಿರುವ ಹಣ

389 (740) ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞ ನಗರ) ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007–08 ರಿಂದ 2010–11ನೇ ಸಾಲಿನವರೆಗೆ ಸರ್ಕಾರ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು;

ಆ) ಈ ಅವಧಿಯಲ್ಲಿ ಸರ್ಕಾರಿ ನೌಕರರ ವೇತನಕ್ಕಾಗಿ ಹಾಗೂ ಇತರ ಯೋಜನೇತರ ಬಾಬ್ತುಗಳಿಗಾಗಿ ಖರ್ಚು ಮಾಡಿರುವ ಮೊತ್ತವೆಷ್ಟು?

ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು)

ಅ) 2007–08 ರಿಂದ 2010–11ನೇ ಸಾಲಿನವರೆಗೆ ಸರ್ಕಾರವು ಯೋಜನಾ ಬಾಬ್ತಿನಡಿಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡಿರುವ ಹಣದ ಮೊತ್ತ ಕೆಳಕಂಡಂತಿರುತ್ತದೆ: